

ಹಠಾತ್ತನೇ ಉಂಟಾಗುವ ಸ್ಥಿರವಿದ್ಯುತ್ ವಿಸರ್ಜನೆಯೇ ಸಿಡಿಲು, ಮಿಂಚು. ಇದು ಚಂಡಮಾರುತದ ಸಂದರ್ಭದಲ್ಲಿ ಭೂಮಿಯ ವಾತಾವರಣದಲ್ಲಿ ಘಟಿಸುವಂಥ ವಿದ್ಯಮಾನ. ಈ ವಿದ್ಯುತ್ ವಿಸರ್ಜನೆ ಮೋಡಗಳ ನಡುವೆ ಅಥವಾ ಮೋಡ ಮತ್ತು ನೆಲದ ನಡುವಣ ವಿದ್ಯುತ್ತಾವೇಶಿತ ಪ್ರದೇಶ ಅಥವಾ ವಲಯದಲ್ಲಿ ಘಟಿಸುತ್ತದೆ.

ಚಿತ್ರ: ಬಿ.ಕೆ. ಜನಾರ್ಧನ್

ಬೊಬ್ಬೆಗಳಾಗುವುದರ ಜೊತೆಗೆ ಎಲಬುಗಳ ಮುರಿತ, ಆಳವಾದ ಸುಟ್ಟಗಾಯಗಳಂತಹ ತೀವ್ರ ಸ್ವರೂಪದ ಗಾಯಗಳಾಗುವುದು ಅಪರೂಪವೇನಲ್ಲ

ಸಿಡಿಲು ಬಡಿದ ಜಾಗೆಯಲ್ಲಿ ಸುಟ್ಟಗಾಯ ಇಲ್ಲವೇ ಛಿದ್ರಗೊಂಡ ಚರ್ಮ ಕಾಣುವುದು. ಈ ಗಾಯದ ಮೂಲಕವೇ ಅದು ದೇಹವನ್ನು ಪ್ರವೇಶಿಸುವುದು. ಇಂಥದೆ ಗಾಯವು ದೇಹದಿಂದ ಹೊರಗೆ ಹೋಗುವ ಭಾಗದಲ್ಲೂ ಕಾಣುವುದು. ಕಾಲಿಗೆ ಹಾಕಿದ ಬೂಟು ಅಥವಾ ಚಪ್ಪಲಿ ಸುಟ್ಟಿರುವುದು ಇಲ್ಲವೆ ಚಿಂದಿ ಚಿಂದಿಯಾಗುವುದು.

ಕೆಲವು ಸಂಧರ್ಭಗಳಲ್ಲಿ ಸಿಡಿಲು ಬಡಿದ ವ್ಯಕ್ತಿ ಸಾವನ್ನಪ್ಪಿದರೂ ಧರಿಸಿದ ಬಟ್ಟೆಗಳಿಗೆ  ಹಾನಿಯಾಗದಿರಬಹುದು. ವ್ಯತಿರಿಕ್ತವಾಗಿ ಮೈಮೇಲಿನ ಬಟ್ಟೆಬರೆಗಳು ಸುಟ್ಟಕರಕಲಾದರೂ ವ್ಯಕ್ತಿಗೆ ಯಾವುದೇ ಗಾಯ ಆಗದಿರಬಹುದು!

ಧರಿಸಿದ ಕನ್ನಡಕದ ಗ್ಲಾಸುಗಳು, ಮೈಮೇಲೆ ಒಡವೆ ವಸ್ತ್ರಗಳೂ ಕರಿಗಿ ಬಿಡುವವು. ಕೀಲಿಕೈಯಂತಹ ಸ್ಟೀಲಿನ ವಸ್ತುಗಳು ಮೆಗ್ನೇಟ್‌ಗಳಾಗಿ ಮಾರ್ಪಾಡಾಗುವವು. ಚರ್ಮದ ಮೇಲೆ ಅವುಗಳ ಗುರುತುಗಳು ಗೋಚರಿಸುವವು.

ಚಿಕಿತ್ಸೆ: ತಕ್ಷಣ ಕೃತ್ರಿಮ ಉಸಿರಾಟ ಪ್ರಾರಂಭಿಸಬೇಕು ಮತ್ತು ಅದನ್ನು ನಾಲ್ಕೈದು ತಾಸುಗಳ ವರಗೆ ಮುಂದು ವರೆಸಬೇಕು. ವೆಂಟಿಲೇಟರ್ ಸೌಲಭ್ಯಗಳು ಸಿಗುವಲ್ಲಿಗೆ ಸ್ಥಳಾಂತರಿಸುವುದು ಸೂಕ್ತ. ಹೆಚ್ಚು ಒತ್ತಡದಲ್ಲಿರುವ ಆಮ್ಲಜನಕವನ್ನು ವ್ಯಕ್ತಿಗೆ ನೀಡಬೇಕು. ಉಸುರಾಟ ಕ್ರಿಯೆ ಸಾಮಾನ್ಯ ಸ್ಥಿತಿಗೆ ತಲುಪಿದ ಮೇಲೆ ಹೃದಯದ ಚಟುವಟಿಕೆ ಪ್ರಚೋದಿಸುವುವಂತಹ ಔಷಧಿಗಳನ್ನು ನೀಡಬೇಕು.

ಸಾಮಾನ್ಯವಾಗಿ ಸಿಡಿಲು ಬಡಿದಾಗ ವ್ಯಕ್ತಿ ಗಾಬರಿಯಾಗಿ, ಹೌಹಾರಿ ಆಘಾತಕ್ಕೆ ಒಳಗಾಗಿರುತ್ತಾನೆ ತುರ್ತು ಚಿಕಿತ್ಸೆ ನೀಡುವುದರ ಜೊತೆಗೆ ಸಲಾಯಿನ್‌ಗಳನ್ನು ಸಾಕಷ್ಟು ಪ್ರಮಾಣದಲ್ಲಿ ನೀಡಿ, ನಾಡಿಬಡಿತ, ಉಸಿರಾಟ, ಬಿ.ಪಿ ಸಾಮಾನ್ಯ ಸ್ಥಿತಿಯಲ್ಲಿರುವ ಕ್ರಮ ತೆಗೆದುಕೊಳ್ಳಬೇಕು. ಎಲ್ಲಾ ವೈದ್ಯಕೀಯ ಸೌಲಭ್ಯಗಳು ಸಿಗುವ ಸ್ಥಳದಲ್ಲಿ ಸಿಡಿಲು ಬಡೆದರೆ, ವ್ಯಕ್ತಿಯ ಸುದೈವಿ ಎಂದೇ ಹೇಳಬೇಕು. ಏಕೆಂದರೆ ತುರ್ತು ಚಿಕಿತ್ಸೆಯಿಂದ ಬದುಕಿಸಬಹುದು, ಆದರೆ, ಸಾಮಾನ್ಯವಾಗಿ ಇಂಥ ಅವಗಢಗಳು ವೈಧ್ಯಕೀಯ ಸೌಲಭ್ಯಗಳು ಸಿಗದ ಸ್ಥಳದಲ್ಲೇ ಆಗುವುದು ಹೆಚ್ಚು. ಆಗ ಅಪಘಾತದಿಂದ ಹೊರಬರದ ವ್ಯಕ್ತಿ ಹೌಹಾರಿ ಸಾಯಬಹುದು!